ಪ್ರಾರಂಭವಾಗಿದೆ. 1965ರಲ್ಲಿ ಪ್ರಾರಂಭವಾದ ಮಲಪ್ರಭಾ ನೀರಾವರಿ ಯೋಜನೆ ಅದರ ಎಸ್ಟಿಮೇಟ್ ಪ್ರಕಾರ 20 ಕೋಟಿ ರೂಪಾಯಿಗಳಲ್ಲಿ ಮುಗಿಯಬೇಕಾಗಿತ್ತು. ಅದರಿಂದ ಎಷ್ಟು ನೀರಾವರಿ ಪ್ರದೇಶವಾಗುತ್ತದೆಂದರೆ 2 ಲಕ್ಷ 68 ಸಾವಿರ ಹೆಕ್ಟೇರ್ ಆ ಯೋಜನೆ ಆಗಬೇಕಾಗಿತ್ತು. ಅದು 7 ವರ್ಷಗಳಲ್ಲಿ ಮುಗಿದು 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ನೀರಾವರಿ ಭೂಮಿಯನ್ನಾಗಿ ಮಾಡಬೇಕಾಗಿತ್ತು. ಇವತ್ತು ರೈತನ ಹೊಲಕ್ಕೆ ನೀರು ಬಂದು ಬೆಳೆಗೆ ಹೆಚ್ಚು ಸಹಾಯವಾಗಬೇಕಾಗಿತ್ತು. ನಮ್ಮ ಯೋಜನೆಯ ಪ್ರಕಾರ, ಇವತ್ತು ಎಷ್ಟೋ ಎಕರೆಗೆ ನೀರಾವರಿಯಾಗ ಬೇಕಾಗಿತ್ತು, ಆದರೆ 32 ವರ್ಷಗಳು ಆದರೂ ಕೂಡ ಇಲ್ಲಿಯವರೆಗೆ ಪೂರ್ಣ ನೀರಾವರಿ ಆಗಿಲ್ಲ. ಈ ಯೋಜನೆಗೆ 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 7 ವರ್ಷದಲ್ಲಿ ಮುಗಿಸಬೇಕಾಗಿತ್ತು. ಆದರೆ 32 ವರ್ಷಗಳಿಂದ 400 ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಖರ್ಚು ಮಾಡಿದ್ದೇವೆ. ಆದರೆ 70 ಸಾವಿರ ಹೆಕ್ಟೇರ್ ಭೂಮಿಗೆ ಇನ್ನು ನೀರಾವರಿಯಾಗಬೇಕಾಗಿದೆ. ಈ ಯೋಜನೆ ಪೂರ್ಣವಾಗಬೇಕಾದರೆ. ನಮಗೆ ಈಗ ನೀರು ಬೇಕಾಗಿರುವುದರಿಂದ ಮಹದಾಯಿ ಯೋಜನೆಯನ್ನು, ಆದಷ್ಟು ಬೇಗ ಮಲಪ್ರಭಾಗೆ ಜೋಡಿಸುವಂತಹ ಕಾರ್ಯವನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಮಾನ್ಯ ನಾಗೇಗೌಡರಿಗೆ ಕೇಳಿಕೊಳ್ಳುತ್ತೇನೆ. ಹೇಗಾದರೂ ಮಾಡಿ ಆ ಮಹದಾಯಿ ಯೋಜನೆಯನ್ನು ಪೂರ್ಣಗೊಳಿಸಿದರೆ, ಮಲಪ್ರಭಾ ಯೋಜನೆಯಿಂದ ಜನರಿಗೆ ಈಗ ನೀರು ಒದಗಬೇಕಾಗಿದೆ. ಆದ್ದರಿಂದ ಈ ಯೋಜನೆಯನ್ನು ಆದಷ್ಟು ಬೇಗ ಮುಗಿಸಬೇಕು. ಸರ್ಕಾರ ಈ ಯೋಜನೆಗೆ ಇಲ್ಲಿಯವರಗೆ ಏನು ವೆಚ್ಚ ಮಾಡಿದೆ. ಇದರ ಸದುಪಯೋಗದಿಂದ ರೈತನ ಅಭಿವೃದ್ಧಿಯ ಕನಸನ್ನು ನಾವು ಕಾಣುತ್ತಾ ಇದ್ದೇವೆ. ಈ ಅಭಿವೃದ್ಧಿ ಆಗಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ಇವತ್ತು ನಮ್ಮ ಇಡೀ ಗ್ರಾಮಗಳಲ್ಲಿ ಎಲ್ಲಾ ಕಡೆ ನಿರುದ್ಯೋಗ ಸಮಸ್ಯೆಯನ್ನು ಕಾಣುತ್ತಿದ್ದೇವೆ. ಈ ಒಂದು ನಿರುದ್ಯೋಗ ಸಮಸ್ಯೆಯನ್ನು ಎದುರಿಸಲಿಕ್ಕೆ ನಮ್ಮ ಪ್ರಯೋಜನ ತೀವ್ರವಾಗಿ ಆಗಬೇಕು ಎಂಬುದು ನಮ್ಮ ಕನಸು.

(ಸದನವು 1-32ಕ್ಕೆ ಮುಕ್ತಾಯಗೊಂಡು ಪುನಃ ಮದ್ಯಾಹ್ನ 2-30 ಗಂಟೆಗೆ ಸಮಾವೇಶಗೊಳ್ಳುವುದು)

ಸದನವು 3-00 ಗಂಟೆಗೆ ಪುನಃ ಸಮಾವೇಶಗೊಂಡಿತು

ಉಪಾಧ್ಯಕ್ಷರು : ( ಶ್ರೀ ಚಂದ್ರಶೇಖರ ಮಾಮನಿಯವರು) ಅಧ್ಯಕ್ಷ ಪೀಠದಲ್ಲಿದ್ದರು.

## ಪ್ರಕಟಣೆ

ಉಪಾಧ್ಯಕರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 109ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ 8-5-98ರಂದು ಮೈಸೂರು ಅರಮನೆ ಅರ್ಚನೆ ಮತ್ತು ವರ್ಗಾವಣೆ ವಿಧೇಯಕ 1998 ಅನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿತು ಎಂದು ಈ ಮೂಲಕ ತಿಳಿಸುತ್ತಿದ್ದೇನೆ.